ಕರ್ನಾಟಕ ಸರ್ಕಾರ

ಸಂಖ್ಯೆ: ಆರ್.ಡಿ.ಪಿ/6/ಬಿ.ಜಿ.ಎಸ್/2014

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 04.12.2014

ಇಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ,

ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ : ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಸಹಾಯಧನ ಪಡೆಯಲು ಪರಿಷ್ಕೃತ ನಮೂನೆಯ ಕುರಿತು

ಉಲ್ಲೇಖ : 1) ದಿನಾಂಕ 22.11.2014 ರಂದು ನಿರ್ದೇಶಕರು (ಗ್ರಾಮೂಸೌ-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

2) ಸರ್ಕಾರದ ಪತ್ರ ಸಂಖ್ಯೆ : ಗ್ರಾಅಪ/19/ಜೈಅಯೋ/2014 ದಿನಾಂಕ 30.07.2014

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸಭಾ ನಡವಳಿಗಳನ್ವಯ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಜೈವಾನಿಲ ಸ್ಥಾವರ ನಿರ್ಮಿಸುವ ಫಲಾನುಭವಿಗಳ (ಉಲ್ಲೇಖ (2)ರಲ್ಲಿನ) ನಮೂನೆಯನ್ನು ಪರಿಷ್ಕರಿಸಿ ಸರಳೀಕರಣಗೊಳಿಸಲು ಮನವಿ ಮಾಡಿದ್ದರು.

ಅದರಂತೆ ಸಹಾಯಧನ ಪಡೆಯಲು ಪರಿಷ್ಕೃತ ನಮೂನೆಯನ್ನು ತಯಾರಿಸಿ ಈ ಪತ್ರಕ್ಕೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

6/12/14

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಗ್ರಾಮೂಸೌ-2) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ನಮೂನೆ – 1

**ರಾಷ್ಟ್ರೀಯ ಜೈವಾನಿಲ ಮತ್ತು ಮ್ಯಾನುರ್ ಮ್ಯಾನೇಜ್‌ಮೆಂಟ್ ಯೋಜನೆ (NBMMP) ಕೌಟುಂಬಿಕ ಜೈವಾನಿಲ ಸ್ಥಾವರ ಹೊಂದಲು ನೀಡಬೇಕಾದ ನಮೂನೆ**

ಇವರಿಗೆ, ದಿನಾಂಕ :

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು,
ಗ್ರಾಮ ಪಂಚಾಯಿತಿ,

---------------------

ಮಾನ್ಯರೇ,

ವಿಷಯ : ಕೌಟುಂಬಿಕ ಜೈವಾನಿಲ ಸ್ಥಾವರ ಹೊಂದಲು ಅರ್ಜಿ ನೀಡುತ್ತಿರುವ ಬಗ್ಗೆ.

ವಿಷಯಕ್ಕೆ ಸಂಬಂಧಿಸಿದಂತೆ, --------------------------- ಗ್ರಾಮ ಪಂಚಾಯಿತಿಯ ----------------------- ಗ್ರಾಮದ ನಿವಾಸಿ ಆದ ನಾನು ಕೌಟುಂಬಿಕ ಜೈವಿಕ ಅನಿಲ ಘಟಕ ಹೊಂದಲು ಇಚ್ಛಿಸಿದ್ದು, ನನಗೆ ಸರ್ಕಾರದಿಂದ ಅನಿಲ ಸ್ಥಾವರವನ್ನು ಟರ್ನ್ ಕೀ ಆಧಾರದ ಮೇಲೆ ನಿರ್ಮಿಸಿ ಕೊಡಲು ಕೋರಿ, ಈ ಕೆಳಗಿನ ವಿವರಗಳನ್ನು ಸಲ್ಲಿಸುತ್ತಿದ್ದೇನೆ.

| ಕ್ರಸಂ | ವಿವರ | |
|---|---|---|
| 1 | ಫಲಾನುಭವಿಯ ಹೆಸರು/ತಂದೆಯ/ಗಂಡನ ಹೆಸರು | |
| 2 | ಗ್ರಾಮದ ಹೆಸರು | |
| 3 | ಗ್ರಾಮ ಪಂಚಾಯಿತಿಯ ಹೆಸರು | |
| 4 | ಫಲಾನುಭವಿಯ ವರ್ಗ ಎಸ್.ಸಿ./ಎಸ್.ಟಿ/ಇತರೆ | |
| 5 | ಕುಟುಂಬದ ಒಟ್ಟು ಜನ ಸಂಖ್ಯೆ | |
| 6 | ಲಭ್ಯವಿರುವ ರಾಸುಗಳ ಸಂಖ್ಯೆ | |
| 7 | ಅನಿಲ ಸ್ಥಾವರ ನಿರ್ಮಿಸಲು ಜಾಗದ ಲಭ್ಯತೆ | ಇದೆ |
| 8 | ಅನಿಲ ಸ್ಥಾವರ ಮಾದರಿ ಮತ್ತು ಘಾತ್ರ | ದೀನ ಬಂದು/ಕೆ.ವಿ.ಐ.ಸಿ------ ಘ.ಮೀ. |
| 9 | ಟರ್ನ್ ಕೀ ಏಜೆನ್ಸಿಯ ಹೆಸರು ಮತ್ತು ವಿಳಾಸ | |
| 10 | ಆಧಾರ್ ಸಂಖ್ಯೆ / ಗುರುತಿನ ಚೀಟಿ ಸಂಖ್ಯೆ | |
| 11 | ಅಂಚೆ ಪಿನ್ ಕೋಡ್ | |

ಮೇಲೆ ತಿಳಿಸಿರುವ ಟರ್ನ್ ಕೀ ಏಜೆನ್ಸಿಯು ನನಗೆ ಅನಿಲ ಸ್ಥಾವರ ನಿರ್ಮಿಸಿಕೊಡಲು ಸಿದ್ಧರಿದ್ದು, ಇವರಿಂದ ನಿರ್ಮಿಸಿಕೊಳ್ಳಲು ಅನುಮತಿ ನೀಡಬೇಕೆಂದು ತಮ್ಮಲ್ಲಿ ಕೋರಿದೆ.

ತಮ್ಮ ವಿಶ್ವಾಸಿ

ಫಲಾನುಭವಿಯ ಸಹಿ

## ಗ್ರಾಮ ಪಂಚಾಯಿತಿ ದೃಡೀಕರಿಸಿದೆ

ಮೇಲೆ ತಿಳಿಸಿರುವ ಫಲಾನುಭವಿಯು ಟರ್ನ್ ಕೀ ಆಧಾರದ ಮೇರೆಗೆ ಜೈವಾನಿಲ ಸ್ಥಾವರ ನಿರ್ಮಿಸಿಕೊಳ್ಳಲು ದಿನಾಂಕ -------------- ರಂದು ಅರ್ಜಿ ಸಲ್ಲಿಸಿರುತ್ತಾರೆ. ಹಾಗೂ ದೃಡೀಕರಿಸಿದೆ ಮತ್ತು ಮುಂದಿನ ಕ್ರಮಕ್ಕಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು --------------- ಜಿಲ್ಲಾ ಪಂಚಾಯತ್ ಇವರಿಗೆ ಕಳುಹಿಸಿದೆ.

ಸಹಿ

ಪಂಚಾಯತ್ ಅಭಿವೃದ್ಧಿ ಅಧಿಕಾರಿ,
ಗ್ರಾಮ ಪಂಚಾಯಿತಿ-----------

# ಕರ್ನಾಟಕ ಸರ್ಕಾರ

## ರಾಷ್ಟ್ರೀಯ ಜೈವಾನಿಲ ಮತ್ತು ಮ್ಯಾನುರ್ ಮ್ಯಾನೇಜ್‌ಮೆಂಟ್ ಯೋಜನೆ (NBMMP) ಕೌಟುಂಬಿಕ ಜೈವಾನಿಲ ಸ್ಥಾವರ ಪೂರ್ಣಗೊಂಡು ಕಾರ್ಯ ನಿರ್ವಹಿಸುತ್ತಿರುವ ಜೈವಾನಿಲ ಸ್ಥಾವರಕ್ಕೆ ಕೇಂದ್ರ ಮತ್ತು ರಾಜ್ಯ ಸಹಾಯಧನ ಕೋರಿಕೆ ಅರ್ಜಿ

ಇವರಿಗೆ, ವರ್ಷ :

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯಿತಿ,

--------------- ಜಿಲ್ಲೆ

ಇಂದ,

ಶ್ರೀ/ಶ್ರೀಮತಿ :
ಗ್ರಾಮ :
ಗ್ರಾಮ ಪಂಚಾಯಿತಿ :
ತಾಲ್ಲೂಕು :
ದೂರವಾಣಿ/ಮೊಬೈಲ್ :

ಮಾನ್ಯರೇ,

1. ಈ ಕೆಳಗೆ ಸಹಿ ಮಾಡಿರುವ ನಾನು --------------- ಸ.ರೈ./ಅ.ಸ.ರೈ./ಕೃಕಾ/ಪ.ಜಾ/ ಪ.ವರ್ಗ/ಬಿ.ಪಿ.ಎಲ್/ಇತರೆ ವರ್ಗಕ್ಕೆ ಸೇರಿದವನಾಗಿದ್ದು, ರೂ.__________ (ರೂಪಾಯಿ --- ---------------------------------- ಮಾತ್ರ) ಕ್ಕೆ ದಿನಾಂಕ -------- ರಂದು ಸ್ಥಾವರ ಕಾರ್ಯಾರಂಭ ಮಾಡಲಾಗಿದೆ. ನಾನು ನಿರ್ಮಾಣ ಮಾಡಿಸಿಕೊಂಡು ಉಪಯೋಗಿಸುತ್ತಿರುವ ಧೀನಬಂಧು /ಕೆವಿಐಸಿ ಮಾದರಿಯ 2/3/4/6 ಘ.ಮೀ. ಗಾತ್ರದ ಜೈವಾನಿಲ ಸ್ಥಾವರಕ್ಕೆ ------- ನೇ ಸಾಲಿಗಾಗಿ ಸರ್ಕಾರದಿಂದ ದೊರಕುವ ಸಹಾಯಧನ ಕೋರಿ ಮುಂಗಡ ಹಣ ಸಂದಾಯ ರಸೀದಿಯೊಂದಿಗೆ ಅರ್ಜಿ ಸಲ್ಲಿಸುತ್ತಿದ್ದೇನೆ.
2. ನಾನು ಈ ಮೊದಲು ಇದೇ ಸ್ಥಾವರಕ್ಕೆ ಯಾವುದೇ ಸಹಾಯಧನವನ್ನು ಯಾವುದೇ ಮೂಲದಿಂದ ಪಡೆದಿಲ್ಲವೆಂದು ಧೃಡೀಕರಿಸುತ್ತೇನೆ ಹಾಗೂ ಅನಧಿಕೃತವಾಗಿ ಎರಡನೇ ಬಾರಿ ಸಹಾಯಧನ ಪಡೆದಿಲ್ಲ ಅಥವಾ ಉದ್ದೇಶ ಪೂರ್ವಕವಾಗಿ ಅನಿಲ ಸ್ಥಾವರದ ಉಪಯೋಗ ಮಾಡಿಕೊಳ್ಳದೇ ಇದ್ದಲ್ಲಿ ನನ್ನಿಂದ ಸಹಾಯಧನವನ್ನು ಮರಳಿ ವಸೂಲಿ ಮಾಡಲು ಸರ್ಕಾರಕ್ಕೆ ಇರುವ ಹಕ್ಕನ್ನು ಈ ಮೂಲಕ ಒಪ್ಪಿರುತ್ತೇನೆ.
3. ಸರ್ಕಾರದ ಅಧಿಕೃತ ಪ್ರತಿನಿಧಿಯು ನನ್ನ ಜೈವಾನಿಲ ಸ್ಥಾವರವನ್ನು ಪರಿಶೀಲಿಸಲು ನನ್ನ ಒಪ್ಪಿಗೆ ಇದೆ ಹಾಗೂ ಸರ್ಕಾರದ ಷರತ್ತುಗಳು ಹಾಗೂ ನಿರ್ದೇಶನದಂತೆ ಸದರಿ ಸ್ಥಾವರವನ್ನು ನನ್ನ ಸ್ವಂತ ಖರ್ಚಿನಲ್ಲಿ ವ್ಯವಸ್ಥಿತ ರೀತಿಯಲ್ಲಿ ಇಟ್ಟುಕೊಳ್ಳಲು ನಾನು ಬದ್ಧನಾಗಿರುತ್ತೇನೆ.

ತಮ್ಮ ವಿಶ್ವಾಸಿ,

ದಿನಾಂಕ:
ಸ್ಥಳ :

ಫಲಾನುಭವಿಯ ಸಹಿ.
ಹೆಸರು:

## ಮುಂಗಡ ಸಹಾಯಧನ ಸಂದಾಯ ರಶೀದಿ

ಸನ್ -------- ನೇ ಸಾಲಿನಲ್ಲಿ ಜೈವಾನಿಲ ಸ್ಥಾವರ ನಿರ್ಮಾಣ ಮಾಡಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಜೈವಾನಿಲ ಸ್ಥಾವರದ ಸಹಾಯಧನ ರೂ. ---------- (ರೂಪಾಯಿ --- ----------------------------------------- ಮಾತ್ರ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, --------------- ಇವರಿಂದ ಪಡೆದಿರುತ್ತೇನೆ.

ನಾನು ನಿರ್ಮಾಣ ಮಾಡಿಸಿಕೊಂಡ ಜೈವಾನಿಲ ಸ್ಥಾವರವನ್ನು ಸರ್ಕಾರ /ಜಿಲ್ಲಾ ಪಂಚಾಯತ್‌ನ ನೊಂದಾಯಿತ ಟರ್ನ್ ಕೀ ಏಜೆನ್ಸಿದಾರರಿಂದ ಮೆ:/ಶ್ರೀ. ---------------------------------- ರವರು ಸ್ವಂತ ಜವಾಬ್ದಾರಿಯಿಂದ ಹಾಗೂ ಅನಿಲ ಸ್ಥಾವರ ನಿರ್ಮಿಸಲು ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಒದಗಿಸಿ, ಟರ್ನ್ ಕೀ ಜಾಬ್ ಫೀ ತಳಹದಿಯ ಮೇಲೆ ಸಹಾಯಧನದ ಮೊತ್ತಕ್ಕೆ ಅನುಗುಣವಾಗಿ 5 ವರ್ಷಗಳ ನಿರ್ವಹಣೆಯ ಗ್ಯಾರಂಟಿಯೊಂದಿಗೆ ಜೈವಾನಿಲ ಸ್ಥಾವರದ ನಿರ್ಮಾಣ ಕಾರ್ಯ ನೆರವೇರಿಸಿ, ತೃಪ್ತಿಕರವಾಗಿ ಮಾಡಿಕೊಟ್ಟಿರುತ್ತಾರೆ ಹಾಗೂ ಸದರಿ ಸ್ಥಾವರವು ದಿನಾಂಕ ------ ----- ರಿಂದ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ.

ಸ್ಥಾವರದ ನಿರ್ಮಾಣಕ್ಕೆ ತಗಲಿದ ಒಟ್ಟು ವೆಚ್ಚದಲ್ಲಿ ಮೇಲ್ಕಂಡ ಸಹಾಯಧನ ಮೊತ್ತವನ್ನು ಹೊರೆತುಪಡಿಸಿ, ವ್ಯತ್ಯಾಸದ ವೆಚ್ಚವನ್ನು ಮಾತ್ರ ನಾನು ಭರಿಸಿರುತ್ತೇನೆ. ಆದ್ದರಿಂದ ಸಹಾಯಧನ ಮೊತ್ತವನ್ನು ಸದರಿ ಟರ್ನ್ ಕೀ ಏಜೆನ್ಸಿದಾರರಿಗೆ ನೇರವಾಗಿ ಪಾವತಿಸಲು ಒಪ್ಪಿರುತ್ತೇನೆ.

ಫಲಾನುಭವಿಯ ಸಹಿ

ಹೆಸರು: ---------------

## ಟರ್ನ್–ಕೀ–ಏಜೆನ್ಸಿದಾರರ ಮುಂಗಡ ಹಣ ಸಂದಾಯ ರಶೀದಿ
## (ಟರ್ನ್–ಕೀ–ಫೀ ಮತ್ತು ಸಹಾಯಧನ)

ಶ್ರೀ ------------------------------------------ ರವರ ಜೈವಾನಿಲ ಸ್ಥಾವರವನ್ನು ನಾನು ಟರ್ನ್–ಕೀ–ಜಾಬ್–ಫೀ ಆಧಾರದ ಮೇಲೆ ---------- ಸಾಲಿನಲ್ಲಿ ನಿರ್ಮಾಣ ಮಾಡಿದ್ದು, ಸ್ಥಾವರವು ಕಾರ್ಯಾರಂಭ ಮಾಡುತ್ತಿರುವ ದಿನಾಂಕದಿಂದ 5 ವರ್ಷಗಳವರೆಗೆ ಸ್ಥಾವರದಲ್ಲಿ ತಾಂತ್ರಿಕ ದೋಷ ಕಂಡುಬಂದಲ್ಲಿ ನನ್ನ ಸ್ವಂತ ಖರ್ಚಿನಿಂದ ಹಾಗೂ ಸಂಪೂರ್ಣ ಜವಾಬ್ದಾರಿಯಿಂದ ಸರಿಪಡಿಸಿಕೊಡಲು ಬದ್ದನಾಗಿರುತ್ತೇನೆ.

ಈ ಸಂಬಂಧ ಟರ್ನ್–ಕೀ–ಫೀ ರೂ. ----------- ಹಾಗೂ ಫಲಾನುಭವಿಯ ಪತ್ರದನ್ವಯ ಸಹಾಯಧನ ರೂ. ------------ ಗಳು ಸೇರಿ ಒಟ್ಟು ರೂ. ----------- (ರೂಪಾಯಿ ----------------------------- ಮಾತ್ರ) ಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ----------------- ಇವರಿಂದ ಪಡೆದಿರುತ್ತೇನೆ.

ನಾನು ಈ ಮೊದಲು ಇದೇ ಸ್ಥಾವರಕ್ಕೆ ಯಾವುದೇ ಸಹಾಯಧನವನ್ನು ಯಾವುದೇ ಮೂಲದಿಂದ ಪಡೆದಿಲ್ಲವೆಂದು ದೃಡೀಕರಿಸುತ್ತೇನೆ ಹಾಗೂ ಅನಧಿಕೃತವಾಗಿ ಎರಡನೇ ಬಾರಿ ಸಹಾಯಧನ ಪಡೆದಿಲ್ಲ ಒಂದು ವೇಳೆ ಪಡೆದಿರುವುದೇ ಆಗಿದ್ದಲ್ಲಿ ನನ್ನಿಂದ ಸಹಾಯಧನವನ್ನು ಮರಳಿ ವಸೂಲಿ ಮಾಡಲು ಸರ್ಕಾರಕ್ಕೆ ಇರುವ ಹಕ್ಕನ್ನು ಈ ಮೂಲಕ ಒಪ್ಪಿರುತ್ತೇನೆ. ಇನ್ನು ಮುಂದೆಯೂ ಸದರಿ ಸ್ಥಾವರಕ್ಕೆ ಸಂಬಂಧಿಸಿದಂತೆ ಯಾವುದೇ ಮೂಲದಿಂದ ಪಡೆಯುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಟರ್ನ್–ಕೀ–ಏಜೆನ್ಸಿದಾರರ ಸಹಿ

ಹೆಸರು: --------------

## ಪರಿಶೀಲನಾ ವರದಿ

| ಕ್ರ.ಸ | ವಿವರ | |
|---|---|---|
| 1 | ಫಲಾನುಭವಿಯ ಹೆಸರು ಮತ್ತು ವಿಳಾಸ | ಮೇಲೆ ತಿಳಿಸಿರುವಂತೆ |
| 2 | ಫಲಾನುಭವಿಯ ವರ್ಗ | ಸ.ರೈ./ಅ.ಸ.ರೈ./ಕೃ.ಕಾ/ಪ.ಜಾ/ ಪ.ವರ್ಗ/ಬಿ.ಪಿ.ಎಲ್/ಇತರೆ |
| 3 | ಕುಟುಂಬದ ಒಟ್ಟು ಜನ ಸಂಖ್ಯೆ | ಮಕ್ಕಳು ______ ದೊಡ್ಡವರು ______ (5ವರ್ಷಕ್ಕಿಂತ ಕಡಿಮೆ) |
| 4 | ಲಭ್ಯವಿರುವ ರಾಸುಗಳ ಸಂಖ್ಯೆ | ಎತ್ತು_____ ಹಸು_____ ಎಮ್ಮೆ_____ ಕರು _____ |
| 5 | ಅನಿಲ ಸ್ಥಾವರ ಮಾದರಿ | ಧೀನ ಬಂದು/ಕೆ.ವಿ.ಐ.ಸಿ ------ ಪ್ಲೆಕ್ಸಿ |
| 6 | ಅನಿಲ ಸ್ಥಾವರದ ಗಾತ್ರ | 2/3/4/5/6 ಘನ ಮೀಟರ್ |
| 7 | ಸ್ಥಾವರ ಕಾರ್ಯಾರಂಭ ಮಾಡಿದ ದಿನಾಂಕ | |
| 8 | ಟರ್ನ್ ಕೀ ಏಜೆನ್ಸಿದಾರರ ವಿವರ | |
| 9 | ಐ.ಎಸ್.ಐ ಮಾರ್ಕ್ ಸ್ಟವ್ ಮತ್ತು ಸಾಮರ್ಥ್ಯ | |
| 10 | ಸ್ಥಾವರ ನಿರ್ಮಿಸಿದ ಗಾರೆ ಕೆಲಸಗಾರರ ಹೆಸರು ವಿಳಾಸ | |

ಮೇಲ್ಕಂಡ ಫಲಾನುಭವಿಯವರ ಮನೆಯಲ್ಲಿ ಟರ್ನ್–ಕೀ–ಏಜೆನ್ಸಿದಾರರಾದ ಮೆ:/ಶ್ರೀ ________________________ ರವರು ಧೀನಬಂಧು/ಕೆ.ವಿ.ಐ.ಸಿ. ಮಾದರಿಯ ____________ ಘನ ಮೀಟರ್ ಗಾತ್ರದ ಜೈವಾನಿಲ ಸ್ಥಾವರವನ್ನು ______________ ಸಾಲಿನಲ್ಲಿ ನಿರ್ಮಿಸಿಕೊಟ್ಟಿರುತ್ತಾರೆ ಹಾಗೂ ಸ್ಥಾವರವು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಧೃಡೀಕರಿಸಿದೆ.

ಪಂಚಾಯತ್ ಅಭಿವೃದ್ಧಿ ಅಧಿಕಾರಿ
________________ ಗ್ರಾಮ ಪಂಚಾಯತ್

ಯೋಜನಾ ಅಭಿಯಂತರರು
ಸಮಗ್ರ ಗ್ರಾಮೀಣ ಇಂಧನ ಯೋಜನೆ
ಜಿಲ್ಲಾ ಪಂಚಾಯತ್ ______________

## ಭಾವ ಚಿತ್ರಗಳು

1) ನಿರ್ಮಾಣ ಜಾಗದ ಫೋಟೋ ಪ್ರಾರಂಭಕ್ಕೆ ಮುಂಚಿನ ಹಂತ ಫಲಾನುಭವಿಯೊಂದಿಗೆ

2) ಸ್ಥಾವರ ನಿರ್ಮಾಣ ಹಂತದ/ತಳಪಾಯ ಫೋಟೋ ಫಲಾನುಭವಿಯೊಂದಿಗೆ

3) ಪೂರ್ಣಗೊಂಡ ಹಂತ ಫೋಟೋ ಫಲಾನುಭವಿ ಮತ್ತು ಯೋಜನಾ ಅಭಿಯಂತರರೊಂದಿಗೆ